# ‘ಕುಲಾಂತರಿ ತಳಿ’ಗಳ ನಗೆಫಸಲಿನ ಕಾಲ

ಆರೋಗ್ಯಕರ ಸಮಾಜಕ್ಕೆ ಹಾಸ್ಯಗಾರರು ಬೇಕು. ಆದರೆ, ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ವಿದೂಷಕರೇ ತುಂಬಿಹೋದರೆ?

ಹಾಸ್ಯ ಎನ್ನುವುದೀಗ ಮನಸ್ಸನ್ನು ಅರಳಿಸುವ ಒಂದು ‘ರಸ’ವಾಗಿಯಷ್ಟೇ ಉಳಿದಿಲ್ಲ. ಅದು, ಸರಕಿನ ರೂಪ ತಾಳಿದೆ. ಅಂಗೈಯಲ್ಲಿನ ಮೊಬೈಲ್ ತೆರೆದರೆ, ದ್ರೌಪದಿಗೆ ಕೃಷ್ಣ ಕರುಣಿಸಿದ ಅಕ್ಷಯವಸ್ತ್ರದಂತೆ ಹಾಸ್ಯದ ಸರಕುಗಳು ನಮ್ಮೆದುರು ಅನಾವರಣಗೊಳ್ಳುತ್ತವೆ. ಆ ಹಾಸ್ಯದ ತುಣುಕುಗಳನ್ನು ನೋಡಿ ನೋಡಿ ನಾವು ದಣಿಯಬೇಕಷ್ಟೆ. ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ, ಯೂಟ್ಯೂಬ್‌ಗಳ ತುಂಬ ಹಾಸ್ಯಗಾರರೇ ತುಂಬಿಕೊಂಡಿದ್ದಾರೆ. ಕಿರುತೆರೆ ವಾಹಿನಿಗಳಲ್ಲಿ ಹಾಸ್ಯದ ಹೆಸರಿನಲ್ಲಿ ರಿಯಾಲಿಟಿ ಶೋಗಳು ತುಂಬಿಕೊಂಡಿವೆ. ಎಲ್ಲರಿಗೂ ನಮ್ಮನ್ನು ನಗಿಸುವುದೇ ಉದ್ದೇಶ. ನಾವು ನಕ್ಕಷ್ಟೂ ಬಳಕೆದಾರರಿಗೆ ಬಲ!

ಇಡೀ ಜಗತ್ತೇ ನಮ್ಮನ್ನು ನಗಿಸಲು ಪ್ರಯತ್ನಿಸುತ್ತಿದ್ದು, ನಾವು ಕೂಡ ಆ ನಗೆಉತ್ಪನ್ನಗಳಿಗೆ ಸ್ಪಂದಿಸುತ್ತಿದ್ದೇವೆ. ಆದರೆ, ನಗು ಎನ್ನುವುದು ಈ ಮೊದಲಿನಂತೆ ಮನಸ್ಸನ್ನು ಅರಳಿಸುತ್ತಿಲ್ಲವೇಕೆ? ಅಥವಾ ಇಂದಿನ ನಗುವಿನ ಆಯುಸ್ಸು ಕೆಲವು ಕ್ಷಣಗಳಿಗೆ ಸೀಮಿತ ಆಗಿರುವುದೇಕೆ? ಇದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಈ ಜಿಜ್ಞಾಸೆಗೆ ಉತ್ತರ ರೂಪದಲ್ಲಿ ಹಾಸ್ಯದ ಸ್ವರೂಪದಲ್ಲಾಗಿರುವ ಬದಲಾವಣೆಯನ್ನು ಗಮನಿಸಬೇಕು. ಹಿಂದೆಲ್ಲ, ಹಾಸ್ಯ ಎನ್ನುವುದು ಬಂಧುಮಿತ್ರರ ಜೊತೆಗಿನ ಮಾತುಕತೆಯಲ್ಲಿ ಹೊರಹೊಮ್ಮುತ್ತಿತ್ತು. ಆ ಹಾಸ್ಯದ ನವನೀತ ರೂಪುಗೊಳ್ಳುವಲ್ಲಿ ನಮ್ಮ ನೇರ ಪಾತ್ರ ಇರುತ್ತಿತ್ತು. ಈಗಿನ ಹಾಸ್ಯ ಮಧ್ಯವರ್ತಿಗಳ ಮೂಲಕ ಸಂಭವಿಸುತ್ತಿದೆ. ಮನೆಮಂದಿ ಅಥವಾ ಗೆಳೆಯರ ನಡುವಿನ ಮಾತುಕತೆಯಲ್ಲಿ ಅಥವಾ ಸಹವಾಸದಲ್ಲಿ ಹಾಸ್ಯ ರೂಪುಗೊಳ್ಳುವುದು ಕಡಿಮೆಯಾಗತೊಡಗಿ, ಆ ಸ್ಥಾನದಲ್ಲಿ ‘ಡಿಜಿಟಲ್ ಕಾಮಿಡಿ’ ಕಾಣಿಸಿಕೊಳ್ಳುತ್ತಿದೆ. ಮನುಷ್ಯ ಮನುಷ್ಯನ ನಡುವಣ ನೇರ ಸಂವಹನ ಕಡಿಮೆಯಾಗತೊಡಗಿ, ಡಿಜಿಟಲ್ ಜಗತ್ತಿನ ಸಂಬಂಧಗಳನ್ನು ನಾವು ಹೆಚ್ಚು ಹೆಚ್ಚು ಹಚ್ಚಿಕೊಳ್ಳುತ್ತಿದ್ದೇವೆ. ಕುಟುಂಬದ ಸದಸ್ಯರಿಗೆ ಹುಟ್ಟುಹಬ್ಬದ ಶುಭಾಶಯವನ್ನು ಹೇಳಲಿಕ್ಕೆ ತಾಂತ್ರಿಕ ಸಲಕರಣೆಗಳನ್ನು ಬಳಸುವವರೂ ಇದ್ದಾರೆ. ಮನಸ್ಸು ಮನಸ್ಸುಗಳ ನಡುವೆ ತಂತ್ರಜ್ಞಾನ ರೂಪದ ಮಧ್ಯವರ್ತಿ ಪ್ರವೇಶ ಆಗಿರುವ ಕಾರಣದಿಂದಲೇ, ಹಾಸ್ಯದ ಆರ್ದ್ರತೆ ಹಾಗೂ ಆಯುಸ್ಸು ಕಡಿಮೆಯಾಗಿದೆ.

ಹಾಸ್ಯಕ್ಷೇತ್ರ ಎದುರಿಸುತ್ತಿರುವ ಮತ್ತೊಂದು ಸವಾಲು ಗುಣಮಟ್ಟದ್ದು. ಗುಣಮಟ್ಟ ಎನ್ನುವುದು ಅಭಿರುಚಿಗೆ ಸಂಬಂಧಿಸಿದ ಸಂಗತಿ ಮಾತ್ರವಲ್ಲ. ಮೌಲ್ಯಕ್ಕೆ ಸಂಬಂಧಿಸಿದ್ದೂ ಹೌದು. ದೈಹಿಕ ಆಕಾರ, ಬಣ್ಣದ ಜೊತೆಗೆ ಇತ್ತೀಚಿನ ದಿನಗಳಲ್ಲಿ ಜಾತಿ–ಧರ್ಮ, ಭಾಷೆಗಳೂ ಹಾಸ್ಯದ ಸರಕುಗಳಾಗಿವೆ. ಹಾಸ್ಯದ ಹೆಸರಿನಲ್ಲಿ ನಡೆಯುವ ವಿಕೃತಿ ಆತಂಕ ಹುಟ್ಟಿಸುವಂತಹದ್ದು. ಆತಂಕ ಹುಟ್ಟಿಸುವ ಮತ್ತೊಂದು ಸಂಗತಿಯಿದೆ. ಅದು, ಸಮಾಜದ ಹಿತಕ್ಕಾಗಿ ದುಡಿಯಬೇಕಾದವರು ವಿದೂಷಕರ ಪೋಷಾಕು ತೊಟ್ಟಿರುವುದು. ಪತ್ರಿಕೆಯ ಪುಟಗಳನ್ನು ತೆರೆದರೆ, ಸುದ್ದಿ ವಾಹಿನಿಗಳನ್ನು ನೋಡಿದರೆ, ಈ ಕಾಲದ ‘ರೂಪಾಂತರಿ ವಿದೂಷಕರು’ ಗೋಚರಿಸುತ್ತಾರೆ. ರಾಜಕಾರಣಿಗಳೆಂದು ತಮ್ಮನ್ನು ಕರೆದುಕೊಳ್ಳುವ ಈ ಕೆಲವರು ನಿಜವಾಗಿ ನಿರ್ವಹಿಸುತ್ತಿರುವುದು ವಿದೂಷಕರ ಪಾತ್ರವನ್ನು.

ಒಳ್ಳೆಯ ಹಾಸ್ಯಗಾರರು ತಮ್ಮನ್ನು ತಾವು ವಿಡಂಬಿಸಿಕೊಂಡು ನಗುವನ್ನು ಸೃಷ್ಟಿಸುತ್ತಾರೆ. ಈ ರಾಜಕಾರಣಿಗಳೋ ತಮ್ಮ ಸಹವರ್ತಿಗಳನ್ನು ಹಳಿಯುವ ಮೂಲಕ ಹಾಸ್ಯವನ್ನು ಸೃಷ್ಟಿಸುತ್ತಿದ್ದಾರೆ. ಚುನಾವಣೆ ಹತ್ತಿರವಾದಂತೆಲ್ಲ ನಾಡಿನೆಲ್ಲೆಡೆ ರಾಜಕಾರಣಿಗಳ ಹಾಸ್ಯೋತ್ಸವಗಳು! ಕೆಲವು ರಾಜಕಾರಣಿಗಳು ವ್ಯಂಗ್ಯ–ವಿಡಂಬನೆಯಲ್ಲಿ ಎಷ್ಟು ಪಳಗಿದ್ದಾರೆಂದರೆ, ಅವರ ಮುಂದೆ ವೃತ್ತಿಪರ ವಿದೂಷಕರೂ ನಾಚಬೇಕು. ಹಾಸ್ಯದ ಗುಣಮಟ್ಟ–ಮೌಲ್ಯ ಬದಲಾಗಲಿಕ್ಕೆ ಈ ‘ಕುಲಾಂತರಿ ವಿದೂಷಕರು’ ಪ್ರಮುಖ ಕಾರಣ.

ಅತ್ಯುತ್ತಮ ಹಾಸ್ಯ ನಮ್ಮನ್ನು ಕೇವಲ ನಗಿಸುವುದಿಲ್ಲ; ವಿವೇಚನೆಗೂ ಹಚ್ಚುತ್ತದೆ. ಹಾಸ್ಯದಲ್ಲಿ ನಗು ಸಂಚಾರಿಭಾವವಾದರೆ, ವಿಷಣ್ಣತೆ ಸ್ಥಾಯಿಭಾವ. ಎದೆಯೊಳಗೆ ನೋವನ್ನು ಅದುಮಿಟ್ಟುಕೊಂಡು ಜಗತ್ತನ್ನು ನಗಿಸಿದ ಹಾಸ್ಯಗಾರರ ಉದಾಹರಣೆಗಳು ನಗುವಿನ ಚರಿತ್ರೆಯಲ್ಲಿವೆ. ‘ಅಳುವ ಕಡಲೊಳು ತೇಲಿಬರುತಲಿದೆ ನಗೆಯ ಹಾಯಿದೋಣಿ’ ಎನ್ನುವ ಗೋಪಾಲಕೃಷ್ಣ ಅಡಿಗರ ಕವಿತೆಯ ಸಾಲು ಸೂಚಿಸುವುದೂ, ನಗೆಯ ಹಿಂದಿನ ಸಂಕಟವನ್ನೇ. ಈ ಮಾತು ರಾಜಕಾರಣಿಗಳ ಹಾಸ್ಯದ ಹಾವಳಿಯಲ್ಲೂ ಗುರ್ತಿಸಬಹುದು. ಈ ರಾಜಕಾರಣಿಗಳ ಚೀರಾಟ, ಹಾರಾಟ ನೋಡಿ ಕನಿಕರದಿಂದಲಾದರೂ ಜನರು ನಗಬಹುದು. ಆದರೆ, ಆ ನಗೆಯ ಹಿಂದೆ ಮರೆಮಾಚಿದ ನೋವು ಅರಿವಿಗೆ ಬಾರದಿರುತ್ತದೆಯೆ? ನಮ್ಮ ನಡುವೆಯೇ ಹಸಿದವರಿದ್ದಾರೆ. ಬಡತನದ ಅಂಚಿನಲ್ಲಿ ನಿಲ್ಲುವವರ ಸಾಲು ದೊಡ್ಡದಾಗುತ್ತಲೇ ಇದೆ. ಉದ್ಯೋಗದ ನಿರೀಕ್ಷೆಯಲ್ಲಿ ಕೋಟಿ ಕೋಟಿ ತರುಣ ತರುಣಿಯರಿದ್ದಾರೆ. ರೈತರ ಸಂಕಟಗಳಿಗೆ ತುದಿಮೊದಲೆಂಬುದೇ ಇಲ್ಲ. ವಾಸ್ತವ ಹೀಗಿರುವಾಗ, ಜನರು ನಗುವುದು ಸಾಧ್ಯವೆ? ಸಾಧ್ಯವಿದೆ. ನಮ್ಮ ರಾಜಕಾರಣಿಗಳು ನಗೆದೈತ್ಯರು! ವಾಸ್ತವ ಜಗತ್ತನ್ನು ತಮ್ಮ ಮಾತುಗಾರಿಕೆಯಿಂದ ಮರೆಮಾಚಿ, ಜನರನ್ನು ನಗಿಸುವಲ್ಲಿ ಅವರು ಸಿದ್ಧಹಸ್ತರು.

■ ರಘುನಾಥ ಚ.ಹ.

ಚುನಾವಣೆ ಹತ್ತಿರವಾದಂತೆಲ್ಲ ನಾಡಿನೆಲ್ಲೆಡೆ ರಾಜಕಾರಣಿಗಳ ಹಾಸ್ಯೋತ್ಸವಗಳು! ಕೆಲವು ರಾಜಕಾರಣಿಗಳು ವ್ಯಂಗ್ಯ–ವಿಡಂಬನೆಯಲ್ಲಿ ಎಷ್ಟು ಪಳಗಿದ್ದಾರೆಂದರೆ, ಅವರ ಮುಂದೆ ವೃತ್ತಿಪರ ವಿದೂಷಕರೂ ನಾಚಬೇಕು. ಹಾಸ್ಯದ ಗುಣಮಟ್ಟ–ಮೌಲ್ಯ ಬದಲಾಗಲಿಕ್ಕೆ ಈ ‘ಕುಲಾಂತರಿ ವಿದೂಷಕರು’ ಪ್ರಮುಖ ಕಾರಣ.



ಈಶ್ವರ್